ದಿ: 06-03-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಹೆಚ್ಚುವರಿ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ:

ನಿಶಾನೆ ಪಿ-12 ಶಂಕರನಾರಾಯಣದಲ್ಲಿರುವ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಆಗಿದೆ ಎಂದರೆ ಸರಿ. ಸದರಿ ಅಡಮಾಡ ಪತ್ರವನ್ನು ಮಥಾಯಿಯವರ ಮುಖ್ತ್ಯಾರುಧಾರನಾಗಿ ಬರೆದುಕೊಟ್ಟಿದ್ದೇನೆ ಎಂದರೆ ಸರಿ. ನಿಶಾನೆ ಪಿ-12 ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-12 ರ ಸಂಗತಿಯನ್ನು ವಾದಪತ್ರ ಮತ್ತು ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಪಿ-13 ನ್ನು ನನ್ನ ತಂದೆಯಾದ ಮಥಾಯಿಯವರು ನೀಡಿರುತ್ತಾರೆ. ನಿಶಾನೆ ಪಿ-13 ನ್ನು ಕೇರಳ ರಾಜ್ಯದ ಎರ್ನಾಕುಲಮ್ ಜಿಲ್ಲೆಯ ಮುವಾತ್ತುಪುಜಾ ತಾಲೂಕಿನಲ್ಲಿರುವ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಮಾಡಲಾಗಿರುತ್ತದೆ. ಸದರಿ ಮುಖ್ತ್ಯಾರು ಪತ್ರದ ಪ್ರತಿಯನ್ನು ಶಂಕರನಾರಾರಯಣ ಉಪನೊಂದಣಾಧಿಕಾರಿಗಳ ಕಚೇರಿಯಿಂದ ಪಡೆದಿರುತ್ತೇವೆ.

ನಿಶಾನೆ ಪಿ-13 ರ ಪ್ರಕಾರ ನಮ್ಮ ತಂದೆ ನನಗೆ ಕುಂದಾಪುರದ ಫೆಡರಲ್ ಬ್ಯಾಂಕ್ ನಲ್ಲಿ ಸಾಲ ಪಡೆಯಲು ಮತ್ತು ಅಡಮಾನ ಪತ್ರಕ್ಕೆ ಸಹಿ ಮಾಡಲು ಮಾತ್ರ ಅಧಿಕಾರ ನೀಡಲಾಗಿತ್ತು ಎಂದರೆ ಸರಿಯಲ್ಲ. ನಿಶಾನೆ ಪಿ-13 ರ ಪ್ರಕಾರ ನಮ್ಮ ತಂದೆ ನನಗೆ ಪ್ರತಿವಾದಿಗಳಿಗೆ ಸಾಲ ನೀಡಲು ಮತ್ತು ವಸೂಲಿ ಮಾಡಲು ಯಾವುದೇ ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಬ್ಯಾಂಕ ಖಾತೆಯಿಂದ ನಾನು ಹಣ ಪಡೆಯಲು ಸಹ ನಮ್ಮ ತಂದೆ ನನಗೆ ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-13 ಕ್ಕೆ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹಿರಿಯ ಸಿವಿಲ್ ನ್ಯಾಯಾಧೀಶರು
ಕುಂದಾಪುರ